<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 294/2024**

| ಸಾಕ್ಷಿಯ ಹೆಸರು | ಡಾ. ನಾಗರಾಜು | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | BKN ಸ್ವಾಮಿ | 12 | 8 |
| ವಯಸ್ಸು | 59 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **21.07.2026.** | |
| ಉದ್ಯೋಗ | ವೈದ್ಯರು, ಸ್ಪರ್ಶ ಆಸ್ಪತ್ರೆ | | |
| ವಾಸ ಸ್ಥಳ | ಬೆಂಗಳೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2019 ರಿಂದ ಇಲ್ಲಿಯವರೆಗೆ ಸ್ಪರ್ಶ ಆಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 05.09.2024 ರಂದು ಬೆಳಗಿನ ಜಾವ 2.00 ಗಂಟೆ ಸಮಯದಲ್ಲಿ ಈಶ್ವರ್ ಗೌಡ ರವರು ಹಲ್ಲೆಗೆ ಒಳಪಟ್ಟ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ಪರೀಕ್ಷಿಸಿ ನೋಡಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದವು.

a. ಚುಚ್ಚಿದ್ದ ಗಾಯ 5 x 2 x 1 ಸೆ.ಮಿ. ಎಡ ಎದೆಯ ಮೇಲೆ ಇತ್ತು.

b. ತರಚಿರುವ ಗಾಯ ಬಲ ಮುಖ ಮತ್ತು ಬಲ ಗೈಯ ಮೇಲೆ ಇತ್ತು.

2. ಮೇಲ್ಕಂಡ ಗಾಯಗಳ ಪೈಕಿ 1 ನೇ ಗಾಯ ತೀವ್ರ ಸ್ವರೂಪದ ಗಾಯ ಆಗಿದ್ದು, 2 ನೇ ಗಾಯ ಸಾದಾ ಸ್ವರೂಪದ ಗಾಯ ಆಗಿರುತ್ತದೆ. ಗಾಯಾಳುವಿಗೆ ಸೂಕ್ತ ಚಿಕಿತ್ಸೆ ನೀಡಿ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ನಾನು ನೀಡಿರುವ ಗಾಯಾದ ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು ನಿಶಾನೆ.ಪಿ. 14 ಎಂತಲೂ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 14 (ಎ) ಎಂದು ಗುರುತಿಸಲಾಯಿತು. ಡ್ರಾಗರ್ ನಿಂದ ಚುಚ್ಚಿದ್ದಲ್ಲಿ 1 ನೇ ಗಾಯ ಆಗುವ ಸಾಧ್ಯತೆ ಇರುತ್ತದೆ, 2 ನೇ ಗಾಯ ಯಾರಾದರೂ ಹೊಡೆಯಲು ಹೋದಾಗ ಚರಂಡಿ ಒಳಗೆ ಬಿದ್ದರೆ ಆಗುವ ಸಾಧ್ಯತೆ ಇರುತ್ತದೆ. ಮು.ಮಾ. 1 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ. **MMR** ವಕೀಲರಿಂದ : ಸಮಯ ಕೋರಿದ್ದು, ನೀಡಲಾಯಿತು.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.